**ಕರ್ನಾಟಕ ಸರ್ಕಾರ**

ಸಂಖ್ಯೆ: ಡಿಟಿಇ 01 ಡಿವಿಪಿ (1) 2020/1.

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು 560 001.
ದಿನಾಂಕ: 05-05-2020.

**:ಅನಧಿಕೃತ ಟಿಪ್ಪಣಿ:**

**ವಿಷಯ :** 2020-21ನೇ ಸಾಲಿನಿಂದ ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನ ಸರ್ಕಾರಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ಉಪನ್ಯಾಸಕರಿಗೆ ಭತ್ಯೆ ಪಾವತಿಸಬೇಕಾದ ಲೆಕ್ಕ ಶೀರ್ಷಿಕೆಯ ಬಗ್ಗೆ

**ಉಲ್ಲೇಖ :**
1. ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 02 ಟಿಪಿಇ 2020, ದಿನಾಂಕ 01.04.2020
2. ಸರ್ಕಾರದ ಆದೇಶ ಸಂಖ್ಯೆ: ಇಡಿ 11 ಹೆಚ್‌ಪಿಸಿ 2020, ದಿನಾಂಕ 03.04.2020

ಮೇಲೆ ನಮೂದಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರ ಆದೇಶದಲ್ಲಿ ಆರ್ಥಿಕ ಇಲಾಖೆಯು 2020-21 ನೇ ಸಾಲಿನ ಆಯವ್ಯಯದಲ್ಲಿ ವೇತನ-ಮಾರ್ಚ್2020 ಮತ್ತು ಕಛೇರಿಯ ತುರ್ತು ವೆಚ್ಚಗಳಿಗಾಗಿ ನಿಗಧಿಯಾದ ಆಯವ್ಯಯದಲ್ಲಿ 1/12 ಅನುದಾನವನ್ನು ಮಾತ್ರ ಬಿಡುಗಡೆ ಮಾಡಲು ಅನುಮತಿಸಿ ಆದೇಶಿಸಲಾಗಿದೆ.

ಉಲ್ಲೇಖ (2) ರ ಸರ್ಕಾರದ ಆದೇಶದಲ್ಲಿ ಉಲ್ಲೇಖ (1) ರ ಆರ್ಥಿಕ ಇಲಾಖೆಯ ಆದೇಶಕ್ಕೆ ಪೂರಕವಾಗಿ ತಾಂತ್ರಿಕ ಶಿಕ್ಷಣ ಇಲಾಖೆಯ 2020-21 ನೇ ಸಾಲಿನ ಮುಂದುವರಿಗೆ ಕಾರ್ಯಕ್ರಮಗಳ ಅಡಿ ಬರುವ ವೇತನ, ಕಛೇರಿ ವೆಚ್ಚಗಳ ಲೆಕ್ಕ ಶೀರ್ಷಿಕೆಯಡಿ ಮೊದಲ ಮಾಸಿಕ ಕಂತಿನ ಅನುದಾನವನ್ನು ಬಳಸಿಕೊಳ್ಳಲು ಹಾಗೂ ಬಿಡುಗಡೆಗೊಳಸಲು ಅನುಮತಿ ನೀಡಿ ಆದೇಶಿಸಲಾಗಿದೆ.

2020-21 ನೇ ಸಾಲಿನ ಆಯವ್ಯಯದಲ್ಲಿ ಇಲಾಖೆಯ ಅಧೀನದಲ್ಲಿರುವ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ಉಪನ್ಯಾಸಕರಿಗೆ ಅರೆಕಾಲಿಕ ಭತ್ಯೆ ಪಾವತಿಸಲು ಹೊಸ ಉಪ ಶೀರ್ಷಿಕೆ "324" ಗೌರವ ಧನ ಅನ್ನು ಸೃಜಿಸಿ ಅನುದಾನವನ್ನು ಒದಗಿಸಲಾಗಿದೆ.

ಆದುದರಿಂದ 2020-21 ನೇ ಸಾಲಿನಿಂದ ಸರ್ಕಾರಿ ಪಾಲಿಟೆಕ್ನಿಕ್/ ಕಿರಿಯ ತಾಂತ್ರಿಕ ಶಾಲೆಯಲ್ಲಿ ಕಾರ್ಯನಿರ್ವಹಿಸಿರುವ/ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ಉಪನ್ಯಾಸಕರ ಭತ್ಯೆಯ ವೆಚ್ಚವನ್ನು ಲೆಕ್ಕ ಶೀರ್ಷಿಕೆ "2203-00-105-0-01-324-ಗೌರವಧನ" ರಡಿಯಲ್ಲಿ ಹಾಗೂ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸಿರುವ/ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ಉಪನ್ಯಾಸಕರ ಭತ್ಯೆಯನ್ನು ಲೆಕ್ಕ ಶೀರ್ಷಿಕೆ "2203-00-112-0-02-324-ಗೌರವಧನ" ರಡಿಯಲ್ಲಿ ಭರಿಸಲು ಆದೇಶಿಸಲಾಗಿದೆ.

ನಿರ್ದೇಶಕರು
**ನಿರ್ದೇಶಕರು**
**ತಾಂತ್ರಿಕ ಶಿಕ್ಷಣ ಇಲಾಖೆ**
**ಬೆಂಗಳೂರು.**

ಇವರಿಗೆ,

1) ಜಂಟಿ ನಿರ್ದೇಶಕರು (ಆಡಳಿತ), ನಿರ್ದೇಶನಾಲಯ, ಬೆಂಗಳೂರು
2) ಆಡಳಿತಾಧಿಕಾರಿಗಳು, ನಿರ್ದೇಶನಾಲಯ, ಬೆಂಗಳೂರು
3) ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರಿಗೆ
4) ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರಿಗೆ
5) ಎಲ್ಲಾ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಪ್ರಾಂಶುಪಾಲರಿಗೆ
6) ಸಹಾಯಕ ಆಡಳಿತಾಧಿಕಾರಿಗಳು, ನಿರ್ದೇಶನಾಲಯ, ಬೆಂಗಳೂರು
7) ರಿಜಿಸ್ಟ್ರಾರ್ (ಆಡಳಿತ), ನಿರ್ದೇಶನಾಲಯ, ಬೆಂಗಳೂರು
8) ಕಾರ್ಯನಿರ್ವಾಹಕರು, ಇಎಸ್‌ಟಿ 2(ಬಿ), ನಿರ್ದೇಶನಾಲಯ, ಬೆಂಗಳೂರು